ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 83-86
©IIMRD, Mysuru
IIMRD JOURNALS

www.iimrd.com

# ಉಗರಗೋಳದ ಅಪ್ರಕಟಿತ ಶಾಸನ ಮತ್ತು ಸ್ಮಾರಕಗಳು

**ಮಹೇಶ ಬ. ಅಂಗಡಿ[1] ಮತ್ತು ಡಾ. ಎಚ್. ಆಯ್. ತಿಮ್ಮಾಪೂರ[2]**

**ಪೀಠಿಕೆ**

***ಸುಗಂಧವರ್ತಿ*** ಎಂದು ಪ್ರಸಿದ್ಧ ಪಡೆದ ಇಂದಿನ ಸವದತ್ತಿಯು ಕುಂತಲ ದೇಶದ ಕುಹೂಂಡಿ 3000 ನಾಡಿನ ಒಂದು ಭಾಗ, ಸುಗಂಧವರ್ತಿ ಇಂದಿನ ಸವದತ್ತಿಯಾಗಿದ್ದು, ಇದು ತಾಲೂಕು ಕೇಂದ್ರವಾಗಿದೆ. ಇದು ಜಿಲ್ಲಾ ಕೇಂದ್ರವಾದ ಬೆಳಗಾವಿಯಿಂದ 78 ಕಿ.ಮೀ. ಮತ್ತು ನೆರೆಯ ಜಿಲ್ಲೆಯಾದ ಧಾರವಾಡದಿಂದ 37 ಕಿ.ಮೀ ದೂರದಲ್ಲಿದೆ. ಈ ಪ್ರದೇಶವನ್ನು ಚಾಲುಕ್ಯರು, ಯಾದವರು, ಕಲಚೂರಿಗಳು, ಹೊಯ್ಸಳರು, ವಿಜಯನಗರ ಅರಸರು, ಮರಾಠರು ಹಾಗೂ ದೇಶಗತಿಗಳ ಆಳ್ವಿಕೆಗೆ ಒಳಪಡುವುದರ ಮೂಲಕ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಹೊಂದಿದೆ. ಇದರಿಂದಾಗಿ ಸಂಶೋಧಾನಾರ್ಥಿಗಳಿಗೆ ಉತ್ತಮ ಅಧ್ಯಯನ ಕ್ಷೇತ್ರವಾಗಿ ಪರಿಣಮಿಸಿದೆ. ಇಂತಹ ಭವ್ಯ ಪರಂಪರೆಯ ಕುರುಹುಗಳನ್ನು ಸವದತ್ತಿ ಪ್ರದೇಶದ ಸುತ್ತ-ಮುತ್ತಲ ಅನೇಕ ಪ್ರದೇಶದಲ್ಲಿ ಕಾಣಬಹುದು. ಅಂತಹ ಅನೇಕ ಪ್ರದೇಶಗಳಲ್ಲಿ ***"ಉಗರಗೋಳವು"*** ಕೂಡ ಒಂದಾಗಿದೆ.

ಉಗರಗೋಳವು ಪ್ರಾಚೀನ ಬೆಳ್ವಲ 300 ಆಡಳಿತ ವಿಭಾಗದ ಪ್ರದೇಶವಾಗಿತ್ತು. ಪುರಾಣ ಪುಣ್ಯಕಥೆಗಳಲ್ಲಿ ಒಂದಾದ ಏಳುಕೊಳ್ಳದ ಶ್ರೀ ರೇಣುಕಾ ಎಲ್ಲಮ್ಮದೇವಿ ಮಹಾತ್ಮೆ, ಚೌಡಕಿ ಪದಗಳಲ್ಲಿ, ಶಾಸನಗಳಲ್ಲಿ ಈ ಪ್ರದೇಶದ ಉಲ್ಲೇಖ ಕಂಡು ಬರುತ್ತದೆ. ಏಳು ಕೊಳ್ಳದ ಎಲ್ಲಮ್ಮನ ಪ್ರದೇಶದ ಏಳುಕೊಳ್ಳಗಳಲ್ಲಿ ಉಗರಗೋಳವು ಒಂದು. ಉಗರಗೋಳವು ಉರಗಕೊಳ್ಳ ಎಂಬ ಪದದ ರೂಪಾಂತರವಾಗಿದ್ದು; ಉರಗ + ಕೊಳ್ಳ ಅಂದರೆ ***ಹಾವುಗಳಿಂದ ಕೂಡಿದ ಕೊಳ್ಳ*** ಎಂಬರ್ಥ' ಹೊಂದಿದೆ. ಅಕ್ಷರಗಳ ಸ್ಥಾನ ಪಲ್ಲಟ ಹೊಂದಿ (ಗ-ರ) ಉಗರಗೊಳ್ಳವಾಗಿ ರೂಢಿಯಲ್ಲಿ ಬಂದಿದೆ. ಇಂತಹ ಐತಿಹಾಸಿಕ ಹಾಗೂ ಪ್ರಾಮುಖ್ಯತೆಯನ್ನು ಹೊಂದಿರುವ ಈ ಗ್ರಾಮದಲ್ಲಿ ಅನೇಕ ಅಪ್ರಕಟಿತ ಶಾಸನಗಳು ಹಾಗೂ ಸ್ಮಾರಕಗಳಿವೆ.

*[1] ಸಂಶೋಧಕರು, ಕನ್ನಡ ಶಾಸ್ತ್ರೀಯ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.*

*[2] ಮಾರ್ಗದರ್ಶಕರು ಮತ್ತು ಪ್ರಾಂಶುಪಾಲರು, ಅಂಜುಮನ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬೆಳಗಾವಿ.*

ಈ ಅಪ್ರಕಟಿತ ಶಾಸನ ಮತ್ತು ಸ್ಮಾರಕಗಳ ಅಧ್ಯಯನ ಮತ್ತು ಅವುಗಳ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಉದ್ದೇಶವವಾಗಿದ್ದು, ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಮತ್ತು ಅನುಷಂಗಿಕ ಮಾಹಿತಿಯನ್ನು ವಿವಿಧ ಗ್ರಂಥಗಳ ಮೂಲಕ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಕೆರೆಯ ಮೇಲಿರುವ ಅಪ್ರಕಟಿತ ಶಾಸನ**

ಉಗರಗೋಳದಿಂದ ಸವದತ್ತಿಗೆ ಹೋಗುವ ರಸ್ತೆಗೆ ಹೊಂದಿಕೊಂಡಂತೆ ಒಂದು ವಿಶಾಲವಾದ ಕೆರೆಯಿದೆ ಆ ಕೆರೆಯ ಮೇಲೆ ಶ್ರೀ ಬಸವೇಶ್ವರ ದೇವಸ್ಥಾನವಿದ್ದು. ಅದರ ಪಕ್ಕದಲ್ಲಿ ಕೆರೆಗೆ ಇಳಿದು ಹೋಗಲು ಮೆಟ್ಟಿಲಗಳಿವೆ. ಆ ಮೆಟ್ಟಿಲುಗಳ ಪೂರ್ವದಲ್ಲಿ ಅವುಗಳಿಗೆ ಅಡ್ಡಲಾಗಿ ಗೂಟದ ಕಲ್ಲುಗಳನ್ನು ನಿಲ್ಲಿಸಲಾಗಿದೆ. ಅವುಗಳ ಮಧ್ಯದ ಶಿಲೆಯಲ್ಲಿ 2 ಸಾಲುಗಳ ಶಾಸನವಿದ್ದು ಆ ಶಿಲೆಯು ಬೆಣಚುಕಲ್ಲಿನಲ್ಲಿದೆ. ಇದು 81 ಸೆಂ.ಮೀ. ಉದ್ದ 54 ಸೆಂ.ಮೀ. ಅಗಲವಾಗಿದೆ. ಶಾಸನದಲ್ಲಿನ ಲಿಪಿಯ ಆಧಾರದ ಮೇಲೆ ಇದು ಹನ್ನೆರಡು ಅಥವ ಹದಿಮೂರನೇ ಶತಮಾನಕ್ಕೆ ಸೇರಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಈ ಶಾಸನದ ಮೇಲೆ

***"ಕಂ[ಚಿ] ಗಾ ರ ವೃ[ತ್ತಿ]***
***ಅಕ[ರ]ವಾ ಚೋತ್ತಕೆ......"***

ಎಂಬ ಸಾಲುಗಳಿದ್ದು ಇದು 'ಕಂಚಿಗಾರ ವೃತ್ತಿಯವರಿಗೆ ತೆರಿಗೆಯಿಂದ ವಿನಾಯಿತಿ' ಎಂಬ ವಿಷಯವನ್ನು ತಿಳಿಸುತ್ತದೆ. ಈ ಅಂಶವನ್ನು ಶ್ರೀಯುತ ಗೋವರ್ಧನ ಸಂ.ಕ. ಅವರೊಂದಿಗೆ ಮತ್ತು ಅದೇ ಶಾಸನದ ಕೆಳಗೆ ಒಂದು ಗೀಚು ಶಿಲ್ಪವಿದ್ದು ಅದು "ವಾಮನ ಮುದ್ರೆ ಕಲ್ಲು" ಎಂಬುದನ್ನು ಜಯದೇವಪ್ಪ ಜೈನಕೇರಿಯವರೊಂದಿಗೆ ಚರ್ಚಿಸಿ ತಿಳಿದುಕೊಳ್ಳಲಾಯಿತು. ಈ ಶಾಸನವು ವಿಶೇಷವಾಗಿದ್ದು ಈ ಪ್ರದೇಶದಲ್ಲಿ 'ಕಂಚಿಗಾರ' ವೃತ್ತಿಯ ಪ್ರೋತ್ಸಾಹಕ್ಕಾಗಿ ತೆರಿಗೆಯಿಂದ ವಿನಾಯಿತಿ ನೀಡಿ ವೃತ್ತಿ ಬೆಳವಣಿಗೆಗೆ ಅವಕಾಶ ನೀಡಿದ್ದನ್ನು ಕಾಣಬಹುದು.

**ವೀರ ಮಾಸ್ತಿಕಲ್ಲು**

ಈ ಗ್ರಾಮದ ಮಧ್ಯದಲ್ಲಿ ಶ್ರೀ ಕಲ್ಲೇಶ್ವರ ದೇವಸ್ಥಾನವಿದ್ದು, ಅದರ ಮುಂದೆ ವೀರಮಾಸ್ತಿಕಲ್ಲು ಇದೆ. ಇದು 116 ಸೆಂ.ಮೀ ಉದ್ದ 90 ಸೆಂ.ಮೀ. ಅಗಲವಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದಾರೆ. ಕೆಳಗಡೆಗೆ ವೀರ ಹಾಗೂ ಮಹಾಸತಿ ಮತ್ತು ಮಗುವಿನ ಉಬ್ಬು ಶಿಲ್ಪವಿದೆ. ಇದರಿಂದ ಇಡೀ ಕುಟುಂಬವೇ ತ್ಯಾಗ–ಬಲಿದಾನ ಮಾಡಿರಬಹುದೆಂದು ತಿಳಿಯಬಹುದು, ವೀರನು ತಲೆಯ ಮೇಲೆ ಮುಡಿ ಕಟ್ಟಿದ್ದಾನೆ ಗಂಡು ಕಚ್ಚೆ ಹಾಕಿ ಕೈಯಲ್ಲಿ ಬಿಲ್ಲು ಹಿಡಿದು ಹೋರಟಾದ ಭಂಗಿಯಲ್ಲಿದ್ದರೆ, ಸ್ತ್ರೀಯು ಬಲಗೈ ಮೇಲೆಕ್ಕೆತ್ತಿದ್ದಾಳೆ ಕೈಯಲ್ಲಿ ಲಿಂಬೆಹಣ್ಣನ್ನು ಹಿಡಿದಿರುವ ಚಿತ್ರವಿದ್ದು. ಸ್ತ್ರೀಯು ಅಲಂಕೃತಗೊಂಡಿದ್ದು ಕೈಯಲ್ಲಿ ಬಳೆ ತೋಳಬಂದಿ ಹಾಗೂ ವಿಶಿಷ್ಟವಾದ ತಲೆಗೂದಿಲಿನ ಅಲಂಕಾರ ಜಡೆ ಹಾಗೂ ಸೀರೆಯನ್ನು ಧರಿಸಿರುವುದನ್ನು ಜೊತೆಗೆ ಶಿಲ್ಪದಲ್ಲಿರುವ ಮಗುವು ಕೈಮುಗಿಯುವ ಭಂಗಿಯಲ್ಲಿರುದನ್ನು ಕಾಣಬಹುದು.

**ಕುದುರೆ ಸವಾರನ ಶಿಲ್ಪ**

ಕುದುರೆ ಸವಾರನ ಶಿಲ್ಪ ಎಂದರೆ, ಇಂತಹ ಶಿಲ್ಪದಲ್ಲಿ ಹೋರಾಟದ ಚಿತ್ರಣವಿರುದಿಲ್ಲ, ಇಲ್ಲಿ ವೀರನು ಕುದುರೆ ಮೇಲೆ ಕುಳಿತ ಚಿತ್ರ ಮಾತ್ರ ಕಂಡು ಬರುತ್ತದೆ, ಇದು ಯುದ್ಧಕ್ಕೆ ಹೊರಟಿರುವ ಅಥವಾ ಯುದ್ಧದಿಂದ ಮರಳಿದ ವಿಷಯವನ್ನು ಸೂಚಿಸುವ ಚಿತ್ರವಾಗಿರುತ್ತದೆ. ಇಲ್ಲಿ ಕುದುರೆಯು ಅಲಂಕೃತಗೊಂಡಿದ್ದು ಅದಕ್ಕೆ ಭದ್ರವಾದ ಕಡಿವಾಣವನ್ನು ಹಾಕಿದ್ದು ವೀರನು ತನ್ನ ಎಡಗೈಯಲ್ಲಿ ಹಿಡಿದ್ದಾನೆ, ಬಲಗೈಯಲ್ಲಿ ಕತ್ತಿ ಹಿಡಿದುಕೊಂಡಿದ್ದಾನೆ. ಈ ಶಿಲ್ಪದ ಮೇಲ್ಭಾದಲ್ಲಿ ಸೂರ್ಯಚಂದ್ರರ ಚಿತ್ರಗಳಿವೆ.

**ಮಡೆಮ್ಮನ ಕಟ್ಟೆಯ ಮೇಲಿನ ವೀರ ಮಾಸ್ತಿ**

ಬೆಡಸೂರ ರಸ್ತೆಗೆ ಹತ್ತಿಕೊಂಡಿರುವ ಕಟ್ಟೆಯ ಮೇಲೆ ವೀರಮಾಸ್ತಿಶಿಲ್ಪವಿದೆ ಇದಕ್ಕೆ ಸ್ಥಳಿಯವಾಗಿ ಮಡೆಮ್ಮನ ಕಟ್ಟೆ ಎಂದು ಕರೆಯುತ್ತಾರೆ. ಈ ವೀರಮಾಸ್ತಿ ಶಿಲ್ಪದಲ್ಲಿ ವೀರನು ಹೋರಾಡಿದ ಭಂಗಿಯಲ್ಲಿದ್ದಾನೆ. ಸ್ತ್ರೀಯು ಕಣ್ಣು ಮುಚ್ಚಿಕೊಂಡು ಕೈಮುಗಿದು ಧ್ಯಾನಸಕ್ತಳಾಗಿದ್ದಾಳೆ. ನಡುವೆ ಉರ್ಧ್ವ ಮುಖವಾಗಿರುವ ಲಿಂಗವಿದೆ ಅದರಲ್ಲಿ ಅಸ್ಪಷ್ಟವಾದ ಮೂರ್ತಿ ಚಿತ್ರವೊಂದನ್ನು ಕಾಣಬಹುದು. ಈ ವೀರ ಮಾಸ್ತಿ ಶಿಲ್ಪದ ಮೂರ್ತಿಯ ಕೆತ್ತನೆಯನ್ನು ನೋಡಿದಾಗ ಇವು ವಿಶೇಷವಾಗಿವೆಂದು ಹೇಳಬಹುದು.

**ರಾಜ ಲಾಂಛನ ಸ್ಮಾರಕ ಶಿಲ್ಪಗಳು**

ಕೆರೆಯ ದಂಡೆಯ ಮೇಲಿರುವ ಬಸವೇಶ್ವರ ದೇವಸ್ಥಾನದ ಬಳಿಯಿರುವ ಶಾಸನಶಿಲ್ಪದ ಪಕ್ಕದಲ್ಲಿ ನೆಟ್ಟಿರುವ ಶಿಲೆಯಲ್ಲಿ ಮೇಲೆ ಸೂರ್ಯ ಚಂದ್ರರಿದ್ದು ಕೆಳಗಡೆಗೆ ಪಂಚಲಿಂಗಗಳಿವೆ. ಅದರ ಕೆಳಗೆ ಚಿಗರೆ ಅಥವಾ ಎತ್ತಿನ ಚಿತ್ರವಿದ್ದು ಅದರ ಮುಂದೆ ಹರಿತವಾದ ಹಾಗೂ ವಿಶಿಷ್ಟವಾದ ಕತ್ತಿ(ಖಡ್ಗ) ಚಿತ್ತವಿದೆ. ಈ ಸ್ಮಾರಕ ಶಿಲ್ಪವು ರಾಜ ಲಾಂಛನವಾಗಿರಬುಹುದೆಂದು ಲಕ್ಷ್ಮಣ ತೆಲಗಾವಿಯವರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹದೆ ಇನ್ನೊಂದು ಸ್ಮಾರಕ ಶಿಲ್ಪ ಹನಮಂತನ ದೇವಸ್ಥಾನದ ಮುಂದೆ ಇರುವುದು ಇದಕ್ಕೆ ಪುಷ್ಠಿ ನೀಡುತ್ತದೆ.

ಈ ಮೇಲಿನ ಶಾಸನಗಳು ಮತ್ತು ಸ್ಮಾರಕಗಳನ್ನು ನೋಡಿದರೆ ಉಗರಗೋಳ ಗ್ರಾಮವು ಪ್ರಾಚೀನ ಕಾಲದಿಂದಲೂ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆಯಲ್ಲದೆ. ಅಂದಿನ ಸಂಸ್ಕೃತಿ ವೈಭವ ಹಾಗೂ ಸಾಮಾಜಿಕ ಜೀವನವನ್ನು ಈ ಪ್ರಾಚ್ಯಾವಶೇಷಗಳಿಂದ ತಿಳಿಯ ಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಣ್ಣಿಗೇರಿ ಎ.ಎಂ. (1960). ಅಣ್ಣಿಗೇರಿಯ ಶ್ರೀ ಸ್ವಯಂಭು ಅಮೃತೇಶ್ವರ. ಸಾಧನ ಪ್ರೆಸ್, ಧಾರವಾಡ.
- ಭಗವತಿ ಎಸ್.ಎಸ್. ಮತ್ತು ಎಚ್.ಎಸ್. ಮೇಲಿನಮನಿ. (2004).ಕನ್ನಡ ಶಾಸನಗಳ ಅಧ್ಯಯನ. ವಿದ್ಯಾನಿಧಿ ಪ್ರಕಾಶನ, ಗದಗ.
- ನಾಗಯ್ಯ ಜೆ.ಎಂ. (1992). ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ. ಶ್ರೀ ತೋಂಟದಾರ್ಯ ಮಠ, ಗದಗ.
- ಪರಶಿವಮೂರ್ತಿ ಡಿ.ವಿ. (1999). ಕನ್ನಡ ಶಾಸನ ಶಿಲ್ಪ. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶೇಷಾಶಾಸ್ತ್ರಿ ಆರ್. (2004). ಕರ್ನಾಟಕದ ವೀರಗಲ್ಲುಗಳು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.


IIMRD JOURNALS